ಶುರುವಾಯ್ತು. ಮರುಕ್ಷಣವೇ ಅವನ ಫೋನ್ ಬಂತು. 'ಸಾರಿ ಅಶು, ನನ್ನ ಎಕ್ಸ್‌ವೈಫ್ ಸುಯಿಸೈಡ್ ಅಟೆಂಪ್ಟ್ ಮಾಡಿದ್ದಾಳೆ... ಈಗ ನಾನು ಪೊಲೀಸ್ ಸ್ಟೇಷನ್‌ನಲ್ಲಿದ್ದೇನೆ. ಟ್ರಿಪ್ ಕ್ಯಾನ್ಸಲ್ ಮಾಡೋಣ. ನೀವು ಮನೆಗೆ ಹೋಗಿ, ಟಿಕೆಟ್ ದುಡ್ಡು ಹೋದರೆ ಹೋಗಲಿ' ಅಂದದ್ದು ಕೇಳಿ ಅವಳಿಗೆ ಸಿಟ್ಟು ಬಂತು. ಫೋನ್ ಕಟ್ ಮಾಡಿದಳು.


'ಇನ್ನೇನು ಫ್ಲೈಟ್ ಹತ್ತಬೇಕು ಅಷ್ಟರಲ್ಲಿ ಮುಂಬೈ ಆಫೀಸಿಂದ ಮೀಟಿಂಗ್ ಕ್ಯಾನ್ಸಲ್ ಆಗಿದೆ ಅಂತ ಫೋನ್ ಬಂತು! ವಾಪಸ್ ಬಂದುಬಿಟ್ಟೆ...' ಅಂತ ಅಪ್ಪನಿಗೆ ಸುಳ್ಳು ಹೇಳಿದಳು. ಇಡೀ ದಿನ ಶರತ್ ಮೇಲಿನ ಸಿಟ್ಟು ಕಡಿಮೆ ಆಗಲಿಲ್ಲ. ನಾಲ್ಕು ದಿನ ಅವನು ಆಫೀಸಿಗೂ ಬರಲಿಲ್ಲ. ಐದನೇ ದಿನ ಬಂದ. ಆದರೆ, ಯಾರ ಜತೆಗೂ ಮಾತೇ ಆಡಲಿಲ್ಲ. ಅಶ್ವಿನಿಯನ್ನು ಚೇಂಬರ್‌ಗೂ ಕರೆಯಲಿಲ್ಲ. ಅವಳೂ ಹೋಗಲಿಲ್ಲ. ಫೈಲುಗಳನ್ನು ಅಟೆಂಡರ್ ಕೈಲಿ ಕಳಿಸಿಕೊಟ್ಟಳು.

'ಇವತ್ತು ಶರತ್ ಸಾಹೇಬರ ಮೂಡ್ ಸರಿ ಇಲ್ಲ...' ಅಂತ ಅಟೆಂಡರ್ ಹೇಳಿದ. ಏನಾಗಿರಬಹುದು? ಮರುದಿನ ಚೇಂಬರ್‌ಗೆ ಬರುವಂತೆ ಕರೆದ. ಹೋದ ಕೂಡಲೇ ಕಾರಣವೇ ಇಲ್ಲದೆ ಸಾರಿ ಅಂದ. ನನ್ನ ಎಕ್ಸ್‌ವೈಫ್ ಸತ್ತು ಹೋದ್ಲು. ಸುಯಿಸೈಡ್ ನೋಟ್‌ನಲ್ಲಿ ನನ್ನ ಹೆಸರು ಬರೆದಿದ್ದಾಳೆ. ಪೊಲೀಸರ ಪ್ರಶ್ನೆಗಳಿಗೆ ಉತ್ತರ ಹೇಳಿ ಸಾಕಾಯ್ತು. ಎಫ್‌ಐಆರ್ ಆಗಿದೆ. ಅಡ್ವೊಕೇಟ್ ಚಂದ್ರಿಕಾ ನಟರಾಜನ್ ಸಹಾಯಕ್ಕೆ ಬರದಿದ್ದರೆ ಅರೆಸ್ಟ್ ಆಗ್ತಿದ್ದೆ. ಪೊಲೀಸರಿಗೆ, ಲಾಯರ್‌ಗೆ ಅಂತ ಹತ್ತು ಲಕ್ಷ ಖರ್ಚಾಯ್ತು. ಚಾರ್ಜ್‌ಶಿಟ್ ಫೈಲ್ ಆಗೋವರೆಗೆ ನಾನು ಸಿಟಿ ಬಿಟ್ಟು ಹೋಗುವಂತಿಲ್ಲ ಅಂತ ಪೊಲೀಸರು ಹೇಳಿದ್ದಾರೆ ಅಂದ. ಅಶ್ವಿನಿ ಏನೂ ಹೇಳದೆ ಎದ್ದು ಬಂದಳು.

***

'ಮೇಡಂ, ಕಳೆದವಾರ ನಿಮ್ಮನ್ನ ಏರ್‌ಪೋರ್ಟ್ ಹತ್ರ ನೋಡಿದೆ. ನೀವು ಸಿಟಿ ಕಡೆ ಹೊರಟಿದ್ರಿ...' ಅಂತ ಕಂಪನಿ ಕಾರ್ ಡ್ರೈವರ್ ಲೋಗನಾಥನ್ ಹೇಳಿದ. 'ನನ್ನ ರಿಲೇಟಿವ್ಸ್ ಬಂದಿದ್ದರು, ಅವರನ್ನು ಕಳಿಸೋಕೆ ಹೋಗಿದ್ದೆ...'ಅಂತ ಸುಳ್ಳು ಹೇಳಿದಳು.

'ಶರತ್ ಸರ್, ಹೆಂಡ್ತಿ ಸತ್ತು ಹೋದ್ರಂತಲ್ಲ? ಏನಾಗಿತ್ತಂತೆ ಮೇಡಂ?' ಅಂದ.



'ನಂಗೆ ಗೊತ್ತಿಲ್ಲಪ್ಪ, ಸುಯಿಸೈಡ್‌ಗೆ ಟ್ರೈ ಮಾಡಿದ್ರು, ಈಗ ಚೆನ್ನಾಗಿದ್ದಾರೆ ಅಂತ ನನ್ನತ್ರ ಹೇಳಿದ್ರಲ್ಲ... ಯಾವಾಗ ಸತ್ತರಂತೆ?'.

'ಸತ್ತದ್ದು ಅವರ ಮೊದಲ ಹೆಂಡತಿಯಂತೆ ಮೇಡಂ' ಅಂತ ಲೋಗನಾಥ ಹೇಳಿದ್ದನ್ನು ಕೇಳಿ ಅಶ್ವಿನಿ ಬೆಚ್ಚಿದಳು. 'ಅವರಿಗೆ ಇಬ್ಬರು ಹೆಂಡ್ತಿಯರು ಅನ್ನೋದೇ ನಂಗೊತ್ತಿಲ್ಲ. ಇಬ್ಬರಲ್ಲಿ ಸತ್ತವರು ಯಾರು?' ಅಂತ ಕೇಳಿದಳು. ಮರುಕ್ಷಣವೇ, 'ಅವರ ಪರ್ಸನಲ್ ವಿಷಯಗಳ ಬಗ್ಗೆ ನಂಗೆ ಇಂಟರೆಸ್ಟ್ ಇಲ್ಲ' ಅಂದಳು.

'ಸರ್‌ಗೆ ಎರಡು ಸಂಸಾರಗಳು ಮೇಡಂ. ಎರಡನೇ ಹೆಂಡ್ತಿ ಯಾರೋ ಪಾಲಿಟೀಷಿಯನ್ ಮಗಳಂತೆ. ಮೊದಲ ಹೆಂಡ್ತಿ, ಸರ್ ಡೀಸಿ ಆಗಿದ್ದಾಗ ಅವರ ಸೆಕ್ರೆಟರಿ ಆಗಿದ್ರಂತೆ. ಸರ್ ಅವರನ್ನು ಗುಟ್ಟಾಗಿ ಮದುವೆ ಆಗಿದ್ರಂತೆ! ಅವರಿಗೆ ಒಂದು ಮಗು ಇದೆ. ಮನೆಯವರ ಒತ್ತಾಯಕ್ಕೆ ಎರಡನೇ ಮದುವೆ ಆದ್ರಂತೆ. ಮೊದಲೇ ಮದುವೆ ಆಗಿದ್ದು ಗೊತ್ತಾಗಿ ಎರಡನೇ ಹೆಂಡ್ತಿಯೂ ಬಿಟ್ಟು ಹೋದರಂತೆ ಅಂತ ಆಫೀಸಲ್ಲಿ ಎಲ್ರೂ ಮಾತಾಡಿಕೊಳ್ತಿದ್ದಾರೆ. ಇವರೇ ಸರಿ ಇಲ್ಲ ಮೇಡಂ, ಶೋಕಿ ಮನುಷ್ಯ, ಜೊಲ್ಲು ಪಾರ್ಟಿ. ನೀವು ಹುಷಾರಾಗಿರಿ' ಅಂದ. ಲೋಗನಾಥ ಬೇಕಂತಲೇ ಹೇಳಿದನೊ ಅಥವಾ ಸಹಜವಾಗಿ ಹೇಳಿದನೊ ಗೊತ್ತಾಗಲಿಲ್ಲ. ಶರತ್ ಬಲೆಗೆ ಬೀಳೋದನ್ನು ದೇವರೇ ತಪ್ಪಿಸಿದ ಅಂದುಕೊಂಡು ಸುಮ್ಮನಾದಳು.

ಮೂರ್ನಾಲ್ಕು ದಿನ ಶರತ್‌ನ ಮೊದಲ